# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ :- 22/06/2022 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ 60ರ ವಾರ್ಡ್ ಸಮಿತಿ ಸಭೆಯ ನಡುವಳಿ**

ಸಭೆಗೆ ಹಾಜರಿದ್ದ ಅಧಿಕಾರಿಗಳು :

- ಶ್ರೀ. ಮಲ್ಲಪ್ಪ ಭಜಂತ್ರಿ ನೋಡಲ್ ಅಧಿಕಾರಿಗಳು
- ಶ್ರೀ. ಬಸವರಾಜು ವಾರ್ಡ್ ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿ
- ಶ್ರೀ. ನಾಗಭೂಷಣ ಕಿರಿಯ ಆರೋಗ್ಯ ಪರೀವಿಕ್ಷಕಕರು
- ಶ್ರೀ. ಬಾಬು ಆರೋಗ್ಯ ದಫೇದಾರರು
- ಶ್ರೀ. ಶೇಖರ ತೆರಿಗೆ ಪರೀವಿಕ್ಷಕರು
- ಶ್ರೀ. ಎಮ್. ಮಧು ಕಾನೀಸ್ಟೇಬಲ್ ಕೆ.ಜಿ.ಹಳ್ಳಿ ಸಂಚಾರ ಪೋಲೀಸ್ ಠಾಣೆ
- ಶ್ರೀ. ಮಂಜುನಾಥ ಕೆಲಸ ಪರೀವಿಕ್ಷಕರು ಬಿ.ಡಬ್ಲೂ.ಎಸ.ಎಸ್.ಬಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೋಡಲ್ ಅಧಿಕಾರಿರವರು ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು. ವಾರ್ಡ್-60 ರ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ನಡೆಸಲಾಯಿತು.

➢ **ಆರೋಗ್ಯ ಇಲಾಖೆಗೆ ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಪಾರ್ಕ್‌ನ ಸುತ್ತಮುತ್ತ ಸಾಯಂಕಾಲ ಹಾಗೂ ಶನಿ, ಭಾನುವಾರದಂದು ಜನಸಾಂದ್ರತೆ ಹೆಚ್ಚಾಗಿ ಇದ್ದು ಕಸವನ್ನು ಟ್ರೀಗಾಡ್‌ನಲ್ಲಿ ತುಂಬುತ್ತಿದ್ದು ಕೂಡಲೆ ವಹಿಸಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ ಮುಖ್ಯ ರಸ್ತೆಗಳಲ್ಲಿ ಕಸ ನಿರ್ವಹಣೆ ಸರಿಯಾಗಿ ಆಗುತ್ತಿಲ್ಲ ಕೂಡಲೆ ಕ್ರಮ ವಹಿಸಲು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯ ಕನರ್ಸರ್ವ್ನೇನ್ಸಿ ಲೇನ್‌ಗಳನ್ನು ಸ್ವಚ್ಛಗೊಳಿಸಲು ಸೂಚಿಸಿದರು.

**ಕ್ರಮ : ಕಿರಿಯ ಆರೋಗ್ಯ ಪರೀವಿಕ್ಷ್ಕರು ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸಲು ಈ ಸಭೆ ಮುಖಾಂತರ ಸೂಚಿಸಿದರು.**

➢ **ಪೋಲೀಸ್ ಇಲಾಖೆಗೆ (ಸಿವಿಲ್) ಸಂಬಂದಿಸಿರುವುದು**

- ವಾರ್ಡ್ ವ್ಯಾಪ್ತಿಯಲ್ಲಿ ಗಾಂಜಾ ಹಾಗೂ ಮದ್ಯ ಕುಡಿಯುವುದು ಹಾಗೂ ನಿಲುಗಡೆ ವಾಹನಗಳಿಗೆ ಹಾನಿ ಉಂಟು ಮಾಡುವುದು,... ಇನ್ನೂ ಇತರೆ ಅಸ್ಯೆಂಗಿಕ ಕಾರ್ಯಾಚರಣೆ ನಡೆಯುತ್ತಿದ್ದು ಇವುಗಳ ಮೇಲೆ ಕೂಡಲೆ ಕ್ರಮ ಕೈಗೊಳ್ಳಲು ಸೂಚಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿ ಕಳ್ಳತನ ಹೆಚ್ಚಾಗುತ್ತಿದ್ದು ಪೊಲೀಸ್ ಬೀಟ್ ಹಾಕುವುದನ್ನು ಹೆಚ್ಚಿಸಲು ಅಧಿಕಾರಿ ವರ್ಗದವರಿಗೆ ಸೂಚಿಸಿದರು.

ಕ್ರಮ : **ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ಈ ಸಭೆ ಮುಖಾಂತರ ಸೂಚಿಸಲಾಯಿತು.**

➢ <u>ಕಾಮಗಾರಿ ಇಲಾಖೆಗೆ ಸಂಬಂದಿಸಿರುವುದು</u>

- ವಾರ್ಡ್ ವ್ಯಾಪ್ತಿಯ ರಿಚ್ಚರ್ಡ್ ಪಾರ್ಕ್ ಶೌಚಾಲಯವನ್ನು ನವೀಕರಣಗೋಳಿಸಲು ಸೂಚಿಸಿದರು.

- ವಾರ್ಡ್ ವ್ಯಾಪ್ತಿಯ ಸುಂದರ್ ಆಸ್ಪತ್ರೇ ಮುಂದಿನ ರಸ್ತೆಯನ್ನು ಹೊಸದಾಗಿ ನಿರ್ಮಿಸಲು ಸೂಚಿಸಿದರು.

- ವಾರ್ಡ್ ವ್ಯಾಪ್ತಿಯ ಲಾಜಾರ್ ಮುಖ್ಯರಸ್ತೆ ಹಾಗೂ ರಿಚ್ಚರ್ಡ್ ಪಾರ್ಕ್ ಸುತ್ತಮುತಲ್ಲಿನ ಫೂಟ್‌ಪಾತ್‌ಗಳನ್ನು ರೀಪೇರಿ ಮಾಡಲು ಸೂಚಿಸಿದರು.

ಕ್ರಮ : **ಈ ಮೇಲೆ ಸೂಚಿಸಿರುವ ಸಮಸ್ಯೆಗಳಿಗೆ ಶಿಘ್ರದಲ್ಲೆ ಪರಿಹರಿಸುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.**

➢ <u>ಪೊಲೀಸ್ ಇಲಾಖೆಗೆ (ಟ್ರಾಫಿಕ್) ಸಂಬಂದಿಸಿರುವುದು</u>

- ವಾರ್ಡ್ ವ್ಯಾಪ್ತಿಯ ಗಾಸ್ಪಾಲ್ ಸ್ಟ್ರೀಟ್‌ನಲ್ಲಿ ರಸ್ತೆ ಬದಿ ವಾಹನಗಳನ್ನು ಕೂಡಲೆ ತೇರೆವುಗೋಳಿಸಲು ಸೂಚಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಪಾರ್ಕಿಂಗ್ ಮಾಡುತ್ತಿದ್ದು ಕೂಡಲೆ ಕ್ರಮ ವಹಿಸಲು ಸೂಚಿಸಿದರು.

ಕ್ರಮ : **ಪೊಲೀಸ್ ಸಭ್-ಇನ್‌ಪೇಕ್ಟರ್‌ರವರು ಲಿಖಿತ ಪೂರಕವಾಗಿ ಕಂಪ್ಲೆಂಟ್ ನೀಡಬೇಕೆಂದು ಸೂಚಿಸಿದರು.**

ಈ ಎಲ್ಲಾ ವಿಷಯಗಳ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳಲು ಸಂಬಂದಪಟ್ಟವರಿಗೆ ಸೂಚಿಸುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದೆ.

22/6/22

**ನೋಡಲ್ ಅಧಿಕಾರಿ/ ಸದಸ್ಯ ಕಾರ್ಯದರ್ಶಿ**
**ವಾರ್ಡ್-60**

**ಪ್ರತಿಗಳನ್ನು:**

- ಮಾನ್ಯ ಆಡಳಿತಾಧಿಕಾರಿ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಮಾನ್ಯ ವಲಯ ಆಯುಕ್ತರು ರವರ ಮಾಹಿತಿಗಾಗಿ ಸಲ್ಲಿಸಿದೆ.
- ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ
- ಮುಖ್ಯ ಅಭೀಯಂತರರು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಾರ್ಯಪಾಲಕ ಅಭಿಯಂತರರು, ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಜಿ.ಹಳ್ಳಿ ಉಪ-ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನ ತ್ಯಾಜ್ಯ) ಪುಲಕೇಶಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.

- ಸಹಾಯಕ ಕಂದಾಯ ಅಧಿಕಾರಿ (ಕೆ.ಜಿ. ಹಳ್ಳಿ) ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಎಲೆಕ್ಟ್ರಿಕಲ್) ಬಿ.ಬಿ.ಎಂ.ಪಿ. ಮೆಯೋಹಾಲ್ ರವರ ಮಾಹಿತಿಗಾಗಿ ಸಲ್ಲಿಸಿದೆ
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ನೇತಾಜಿ ರಸ್ತೆ, ರವರ ಮಾಹಿತಿಗಾಗಿ ಸಲ್ಲಿಸಿದೆ.
- ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್) ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್) ಕೆ.ಜಿ.ಹಳ್ಳಿ ರವರ ಮಾಹಿತಿಗಾಗಿ ಸಲ್ಲಿಸಿದೆ.
- ಪೊಲೀಸ್ ಇನ್ಸ್‌ಪೆಕ್ಟರ್(ಟ್ರಾಫಿಕ್) ಪುಲಿಕೇಶಿನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
- ವಲಯ ಅರಣ್ಯಾಧಿಕಾರಿಗಳು (ಪೂರ್ವ) ರವರ ಮಾಹಿತಿಗಾಗಿ ಸಲ್ಲಿಸಿದೆ.
- ಕಛೇರಿ ಪ್ರತಿ.